# ಪ್ರಹಸನ ಪ್ರಸಂಗ

ಜೀವನದಲ್ಲಿ ಎಷ್ಟೋ ಅನಾಹುತಗಳಿಗೆ ತಾನೇ ಕಾರಣನಾಗಿದ್ದರೂ ವ್ಯಕ್ತಿಗೆ ಅದರ ಅರಿವೇ ಇರುವುದಿಲ್ಲ. ಅವನು ಕಾರಣಗಳನ್ನು ಹೊರಗೆ ಅರಸುತ್ತಾನೆ, ಹೊರಗಿನ ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ದೂರುತ್ತಾನೆ. ತನ್ನ ದೋಷವನ್ನು ತಾನು ಅರಿಯುವ ಸಾಮರ್ಥ್ಯ ಅವನಿಗಿರುವುದಿಲ್ಲ.

ಆಲ್‌ಫ್ರೆಡ್ ತುಂಬ ದೈವಭಕ್ತನಾದ ಕ್ರೈಸ್ತ. ಅವನು ಆಸ್ಪತ್ರೆಯಲ್ಲಿ ಕಾಯಿಲೆಯಿಂದ ನರಳುತ್ತಿದ್ದ. ಅವನ ಕೊನೆಗಾಲ ಸಮೀಪಿಸಿತ್ತು. ಅವನು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಕ್ರೈಸ್ತ ಪಾದ್ರಿಗಳು ಅವನನ್ನು ನೋಡಲು ಬಂದು ಅವನ ಹಾಸಿಗೆಯ ಸಮೀಪ ನಿಂತಮೇಲೆ ಅವನ ಪರಿಸ್ಥಿತಿ ಇನ್ನೂ ಚಿಂತಾಜನಕವಾಯಿತು. ಅತ್ಯಂತ ಕಾತರದಿಂದ ಏನನ್ನೋ ಬರೆಯಬೇಕೆಂದು ಸೂಚಿಸಿದ. ಪಾದ್ರಿಗಳು ತುಂಬ ಪ್ರೀತಿಯಿಂದ ಒಂದು ಕಾಗದ ಮತ್ತು ಲೇಖನಿಯನ್ನು ಅವನಿಗೆ ಬರೆಯಲು ಕೊಟ್ಟರು. ಆಲ್‌ಫ್ರೆಡ್ ತನ್ನ ಕೊನೆಯ ಶಕ್ತಿಯನ್ನು ಉಪಯೋಗಿಸಿ ತಾನು ಬರೆಯಬೇಕಾದುದನ್ನು ಕಾಗದದ ಮೇಲೆ ಬರೆದನು.

ಪಾದ್ರಿಗಳು ಅದನ್ನು ತೆಗೆದುಕೊಂಡು, ಈಗ ಅದನ್ನು ಓದುವುದು ಉಚಿತವಲ್ಲವೆಂದು ಭಾವಿಸಿ ಜೇಬಿಗೆ ಹಾಕಿಕೊಂಡರು. ಅಷ್ಟರಲ್ಲಿ ಆಲ್‌ಫ್ರೆಡ್ ಮೃತಪಟ್ಟನು.

ಶವಸಂಸ್ಕಾರವಾದಮೇಲೆ ಪಾದ್ರಿಗಳು ತಮ್ಮ ಸಂದೇಶವನ್ನು ಸಾರಿದನಂತರ ಆಲ್‌ಫ್ರೆಡ್ ಕೊಟ್ಟ ಚೀಟಿಯನ್ನು ಜೇಬಿನಿಂದ ಹೊರತೆಗೆದು ಹೇಳಿದರು:

"ಆಲ್‌ಫ್ರೆಡ್ ಸಾಯುವುದಕ್ಕೆ ಮುಂಚೆ ಒಂದು ಚೀಟಿಯನ್ನು ಕೊಟ್ಟಿದ್ದಾರೆ. ಅವರು ಅತ್ಯಂತ ಧಾರ್ಮಿಕ ವ್ಯಕ್ತಿಯಾಗಿದ್ದುದರಿಂದ ನಮಗೆಲ್ಲರಿಗೂ ಒಂದು ಸ್ಫೂರ್ತಿಯ ಬೋಧನೆಯನ್ನು ನೀಡಿರಬೇಕು." ಹೀಗೆ ಹೇಳಿ ಆ ಚೀಟಿಯನ್ನು ಬಿಡಿಸಿ ನೋಡಿದರು. ಅದರಲ್ಲಿ ಹೀಗೆ ಬರೆದಿತ್ತು: "ನೀವು ನನ್ನ ಆಮ್ಲಜನಕ ಟ್ಯೂಬಿನ ಮೇಲೆ ನಿಂತುಕೊಂಡಿದ್ದೀರಿ."

❖ ❖ ❖

ಒಂದು ದೇವಾಲಯದಲ್ಲಿ ವ್ಯಕ್ತಿಯೊಬ್ಬನು ಸಿಹಿತಿಂಡಿಯನ್ನು ಹಂಚುತ್ತಿದ್ದನು. ಸಾಮಾನ್ಯವಾಗಿ ಸಿಹಿತಿಂಡಿಯನ್ನು ಹಂಚುವುದು ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ. ಜನರು ಅವನನ್ನು ಸಿಹಿತಿಂಡಿ ಹಂಚುವುದರ ಕಾರಣ ಕೇಳಿದರು.

"ನನ್ನ ಕುದುರೆ ಕಳೆದುಹೋಗಿದೆ," ಎಂದು ಅವನು ಉತ್ತರಿಸಿದ. ಜನರಿಗೆ ಇದನ್ನು ಕೇಳಿ ಆಶ್ಚರ್ಯವಾಯಿತು.

"ಅರೇ, ಇದೇನಯ್ಯ! ಕುದುರೆ ಕಳೆದುಹೋದರೆ ನಿನಗೆ ದುಃಖವಾಗಬೇಕಿತ್ತು. ಅದರ ಬದಲು ಇಷ್ಟೊಂದು ಆನಂದದಿಂದ ಇದ್ದೀಯಲ್ಲ!"

ಅವನು ಹೇಳಿದ : "ನೋಡಿ, ನಾನು ಒಂದು ವೇಳೆ ಕುದುರೆಯ ಮೇಲೆ ಇದ್ದಿದ್ದರೆ ನಾನೂ ಕಳೆದುಹೋಗಿಬಿಡುತ್ತಿದ್ದೆ. ನಾನು ನಿಜವಾಗಿಯೂ ಅದೃಷ್ಟವಂತ. ಅದಕ್ಕಾಗಿಯೇ ಸಿಹಿ ಹಂಚುತ್ತಿದ್ದೇನೆ."

ನಮ್ಮ ಸ್ಥಿತಿ ಇದಕ್ಕಿಂತಲೂ ಕೇಡು. ನಮ್ಮಲ್ಲಿ ಕುದುರೆಯೇನೊ ಇದೆ. ಆದರೆ ಸವಾರನೇ, ಅಂದರೆ ನಮ್ಮ ನೈಜ ಆತ್ಮ, ಕಾಣೆಯಾಗಿದ್ದಾನೆ. ಇದರ ಅರಿವೇ ನಮಗೆ ಇಲ್ಲವಾಗಿದೆ. ನಮ್ಮ ದೇಹ, ಮನಸ್ಸು ಮತ್ತು ಆಶೋತ್ತರಗಳೇ ನಮ್ಮ ಕುದುರೆ. ಇವುಗಳ ಆರಾಧನೆಯ ಮೂಲಕ ಆತ್ಮ ಹಾನಿಯ ಉತ್ಸವವನ್ನು ಆಚರಿಸುತ್ತಿದ್ದೇವೆ. (ಆಧಾರ: ಇಂಟರ್‌ನೆಟ್)

❖ ❖ ❖

ಪಾರ್ಟಿಯೊಂದರಲ್ಲಿ ವಯಸ್ಸಾದ ಬಿಷಪ್ ಒಬ್ಬರು ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ಭಾಗವಹಿಸಿ ಸುಸ್ತಾಗಿ, ಆರಾಮ ಕುರ್ಚಿಯಲ್ಲಿ ಕುಸಿದು ಬಿದ್ದರು.

ಆ ಮನೆಯ ಯಜಮಾನಿ ತಕ್ಷಣ ಅವರ ಬಳಿ ಓಡಿ ಬಂದು, "ಟೀ ತರಲೇ?" ಎಂದು ಕೇಳಿದರು.

"ಟೀ ಬೇಡ," ಆ ಬಿಷಪ್ ಆಕೆಯನ್ನು ದುರುಗುಟ್ಟಿಕೊಂಡು ನೋಡುತ್ತ ಹೇಳಿದರು.

"ಕಾಫಿ?"

"ಕಾಫೀನೂ ಬೇಡ," ಬಿಷಪ್‌ರ ಶ್ರೀಮದ್ಗಾಂಭೀರ್ಯದ ಉತ್ತರ.

"ಸ್ಕಾಚ್ ಮತ್ತು ನೀರು ?"

"ನೀರು ಬೇಡ."

❋

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ನವೆಂಬರ್ 2002**

| | | |
|---|---|---|
| 1 | ಶುಕ್ರವಾರ | ಏಕಾದಶಿ |
| 4 | ಸೋಮವಾರ | ಶ್ರೀ ಶ್ರೀ ಕಾಳಿ ಪೂಜಾ |
| 15 | ಶುಕ್ರವಾರ | ಏಕಾದಶಿ |
| 16 | ಶನಿವಾರ | ಸ್ವಾಮಿ ಸುಬೋಧಾನಂದ ಜಯಂತಿ |
| 18 | ಸೋಮವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |
| 30 | ಶನಿವಾರ | ಏಕಾದಶಿ |

**ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.**

**ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ**